<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

CC. 926/2018

CW- 08

PW- 04

ಪ್ರಮಾಣ ವಚನ ಬೋಧಿಸಿದ ದಿನಾಂಕ 20-07-2023

| | | |
|---|---|---|
| ಹೆಸರು ಶ್ರೀ / ಶ್ರೀಮತಿ | :- | ಶಾಂತರಾಜ್ ಎಂ.ಎಸ್ |
| ತಂದೆ / ಗಂಡನ ಹೆಸರು | :- | ಶೇಖರಪ್ಪ |
| ವಯಸ್ಸು | :- | 36 ವರ್ಷ |
| ಉದ್ಯೋಗ | :- | ಪೊಲೀಸ್ ಪೇದೆ |
| ವಾಸ ಸ್ಥಳ | :- | ಹರಿಹರ |

ನಾನು 2017 ರಿಂದ 2018 ನೇ ಸಾಲಿನವರೆಗೆ ಹರಿಹರ ವೃತ್ತ ಕಚೇರಿಯಲ್ಲಿ ಅಪರಾಧ ಪತ್ತೆ ವಿಭಾಗದ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

<u>ಮುಖ್ಯ ವಿಚಾರಣೆಃ-</u> ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ದಿಃ 27-06-2018 ರಂದು ನನ್ನನ್ನು, ಚಾಸಾ-6 ಮತ್ತು 7 ರವರನ್ನು ಡಿ ವೈ ಎಸ್ ಪಿ ದಾವಣಗೆರೆ ರವರ ಆದೇಶದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಯ ಪಿ ಎಸ್ ಐ ರವರ ಮುಂದೆ ವರದಿ ಮಾಡಿಕೊಂಡಿದ್ದು, ಅದರಂತೆ ಹೊನ್ನಾಳಿ ಪೊಲೀಸ್ ಠಾಣೆಗೆ ಬಂದು ಚಾಸಾ-1 ರವರ ಮುಂದೆ ವರದಿ ಮಾಡಿಕೊಂಡಿದ್ದು, ತದನಂತರ ಗುನ್ನ ನಂ.430/2017 ರಲ್ಲಿ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-4 ಮತ್ತು 5 ರವರನ್ನು ಕರೆದು ಸದರಿ ಪ್ರಕರಣದ ವಿಚಾರಣೆಗಾಗಿ ಸತೀಶ ಬಿನ್ ಗಿರಿಯಪ್ಪ, ಸುರೇಶ ಬಿನ್ ಗಿರಿಯಪ್ಪ ರವರನ್ನು ಪತ್ತೆ ಮಾಡಿ ಕರೆದುಕೊಂಡು ಬರುವಂತೆ ನಮ್ಮನ್ನು ಚಾಸಾ-4 ಮತ್ತು 5 ರವರ ಜೊತೆ ಕಳುಹಿಸಿಕೊಟ್ಟಿದ್ದು, ಆ ಪ್ರಕಾರ ನಾವುಗಳು ದಾನಿಹಳ್ಳಿ ಗ್ರಾಮಕ್ಕೆ ಹೋಗಿ ಬಾತ್ಮಿದಾರರನ್ನು ಸಂಪರ್ಕಿಸಿ ಮತ್ತು ಮೇಲ್ಕಂಡರವರ ಬಗ್ಗೆ ವಿಚಾರಿಸಿದಾಗ ಬಾತ್ಮಿದಾರರು ಆರೋಪಿತರು ಮನೆಯಲ್ಲಿ ಇದ್ದಾರೆ ಎಂದು ತಿಳಿಸಿದ್ದು, ಆ ಪ್ರಕಾರ ನಾವುಗಳು ರಾತ್ರಿ 09-00 ಗಂಟೆಗೆ ಅವರ ಮನೆಯ ಹತ್ತಿರ ಹೋಗಿ ಅವರನ್ನು ವಿಚಾರಣೆಗೆ ಬನ್ನಿ ಎಂದು ಕರೆದಾಗ ಈ ಪ್ರಕರಣದ ಆರೋಪಿತರು ನಮ್ಮ

ಕರ್ತವ್ಯದ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡಿರುತ್ತಾರೆ. ನಾನು ತದನಂತರ ದೂರವಾಣಿಯ ಮುಖಾಂತರ ಚಾಸಾ-4 ರವರು ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆ ಎಂದು ತಿಳಿಸಿದ್ದು, ನಂತರ ಚಾಸಾ-1, 9 ರಿಂದ 15 ರವರು ಸ್ಥಳಕ್ಕೆ ರಾತ್ರಿ 10-00 ಗಂಟೆಗೆ ಬಂದಿದ್ದು, ನಂತರ ಆರೋಪಿತರ ಮನೆಯ ಹತ್ತಿರ ಹೋಗಿ ಸದರಿ ಆಸಾಮಿಗಳನ್ನು ಮನೆಯಿಂದ ಹೊರಕ್ಕೆ ಕರೆದುಕೊಂಡು ಬರುತ್ತಿದ್ದಾಗ ನಮ್ಮ ಸುತ್ತಲು ಜನರು ಸೇರಿ ನಮ್ಮ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿ, 1 ನೇ ಆರೋಪಿಯು ಈ ಪೊಲೀಸ್ ಸೂಳೇ ಮಕ್ಕಳು ಸುರೇಶ ಮತ್ತು ಸತೀಶನನ್ನು ಕರೆದುಕೊಂಡು ಹೋಗುತ್ತಿದ್ದಾರೆ ಅವರನ್ನು ಬಿಡಬೇಡಿ ಎಂದು 2 ರಿಂದ 8 ನೇ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಸುರೇಶ ಮತ್ತು ಸತೀಶನನ್ನು ಯಾವ ವಿಚಾರಕ್ಕೆ ಕರೆದುಕೊಂಡು ಹೋಗುತ್ತೀರಿ ಎಂದು ಕೇಳಿದ್ದು, ಅದಕ್ಕೆ ನಾವು ಆರೋಪಿತರನ್ನು ಗುನ್ನ ನಂ.430/2017 ರ ಪ್ರಕರಣದಲ್ಲಿ ವಿಚಾರಣೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು ಸಹ ಆರೋಪಿತರು ನಮ್ಮ ಮಾತನ್ನು ಕೇಳದೇ, ನಮ್ಮ ಜೊತೆ ಜಗಳ ತೆಗೆದು ನಮ್ಮನ್ನು ತಳ್ಳಾಡಿದ್ದು, 7 ನೇ ಆರೋಪಿ ಚಾಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿ, ಸಮವಸ್ತ್ರವನ್ನು ಹರಿದುಹಾಕಿದ್ದು, 1 ನೇ ಆರೋಪಿ ಕೈ ಮುಷ್ಟಿಯಿಂದ ಚಾಸಾ-1 ರವರ ಎದೆಗೆ ಹೊಡೆದು, ಅಲ್ಲೆ ಇದ್ದ ಕಲ್ಲಿನಿಂದ ಚಾಸಾ-1 ರವರ ಬಲಗಾಲಿಗೆ ಹೊಡೆದಿರುತ್ತಾನೆ. ನಂತರ ನಮ್ಮ ಇಲಾಖೆಯ ಸಿಬ್ಬಂದಿಗಳು ಊರಿನ ಜನರನ್ನು ಸಮಾಧಾನ ಪಡಿಸಿ ಅವರ ಮನೆಗಳಿಗೆ ಕಳುಹಿಸಿದ್ದು, ತದನಂತರ ಚಾಸಾ-1 ರವರು ನ್ಯಾಮತಿ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿರುತ್ತಾರೆ. ಈ ಬಗ್ಗೆ ಚಾಸಾ-21 ರವರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರಿಂದ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀಸವಾಲು:- ಆರೋಪಿಪರ ವಕೀಲರಿಂದ.

ಗುನ್ನ ನಂ.430/2017 ರಲ್ಲಿ ಆರೋಪಿತರು ಯಾರು ಎನ್ನುವುದು ನನಗೆ ಗೊತ್ತಿಲ್ಲ. ಗುನ್ನ ನಂ.430/2017 ಪ್ರಕರಣವು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುತ್ತದೆ. ಆ ಸಮಯದಲ್ಲಿ ನಾನು ಹರಿಹರ ವೃತ್ತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಹರಿಹರ ವೃತ್ತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ಗುನ್ನ ನಂ.430/2017 ರ ಆರೋಪಿತರ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿಯುತ್ತಾರೆ. ದಾನಿ ಹಳ್ಳಿ ಗ್ರಾಮ ಕೊರಚರ ಕಾಲೋನಿಗೆ ಹೋಗಿರುತ್ತೇವೆ. ಬಾತ್ಮಿದಾರರನ್ನು ನಾವು ದಾನಿಹಳ್ಳಿ ಗ್ರಾಮದಲ್ಲಿದ್ದಾಗ ಮಾಹಿತಿಯನ್ನು ಪಡೆದುಕೊಂಡು ನಂತರ ಕೊರಚರ ಕಾಲೋನಿಗೆ ಹೋಗಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಹೋದಾಗ ಜನರು ಇರಲಿಲ್ಲ. ನಾವು ಕೊರಚರ ಕಾಲೋನಿಗೆ ಹೋದಾಗ ಆ ಸಮಯದಲ್ಲಿ ವಿದ್ಯುತ್ ಚಾಲ್ತಿಯಲ್ಲಿತ್ತು. ಹಳ್ಳಿಗಳಲ್ಲಿ ರಾತ್ರಿ 09-00 ಗಂಟೆ ಸಮಯದಲ್ಲಿ ಸಾಮಾನ್ಯವಾಗಿ ಜನರು ಮಲಗಿರುತ್ತಾರೆ ಎಂದರೆ ಸರಿ. ನಾವು ಸುರೇಶ ಮತ್ತು ಸತೀಶ ರವರ ಮನೆಯ ಒಳಗೆ ಹೋದ ಸಮಯದಲ್ಲಿ ಹೆಣ್ಣು ಮಕ್ಕಳು ಮತ್ತು ಮಕ್ಕಳು ಇರಲಿಲ್ಲ. ಆರೋಪಿತರೆಲ್ಲರೂ ಒಂದೇ ಮನೆಯವರು ಎಂದರೆ ಸರಿ. ನಾವು ಶೂ ಹಾಕಿಕೊಂಡು ಮನೆಯ ಒಳಗಡೆ ಹೋಗಿ ಅನುಚ್ಚಿತವಾಗಿ ವರ್ತನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಮನೆಯಲ್ಲಿ ಅನುಚ್ಚಿತವಾಗಿ ವರ್ತನೆ ಮಾಡಿದ್ದರಿಂದ ಮನೆಯಲ್ಲಿದ್ದವರೆಲ್ಲರೂ ಗಾಬರಿಗೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಸಮವಸ್ತ್ರದಲ್ಲಿ ಹೋಗಿರಲಿಲ್ಲ ಎಂದರೆ ಸರಿ. ಮನೆಯಲ್ಲಿ ಮಲಗಿದ್ದ ಸುರೇಶ ಮತ್ತು ಸತೀಶರವನ್ನು ನಾನು ಮನೆಯಿಂದ ಹೊರಗೆ ಎಳೆದುಕೊಂಡು ಬಂದೆ ಎಂದರೆ ಸರಿಯಲ್ಲ. ಮನೆಯಲ್ಲಿದ್ದ ಹೆಣ್ಣು ಮಕ್ಕಳು ಅಂದರೆ 02 ರಿಂದ 6 ನೇ ಆರೋಪಿತರು ನಮ್ಮನ್ನು ಯಾಕೆ ಇವರನ್ನು ಕರೆದುಕೊಂಡು ಹೋಗುತ್ತೀರಿ ಎಂದು ಕೇಳಿದಾಗ ನಾವು ಅವರನ್ನು ಹಿಡಿದು ಎಳೆದಾಡಿರುತ್ತೇವೆ ಎಂದರೆ ಸರಿಯಲ್ಲ. ಸತೀಶ ಮತ್ತು ಸುರೇಶ ರವರನ್ನು ರಾತ್ರಿ 09-00 ಗಂಟೆ ಸಮಯದಲ್ಲಿ ಅವರ ಮನೆಯಿಂದ ಠಾಣೆಗೆ ವಿಚಾರಣೆಗೆ ಕರೆದುಕೊಂಡು ಬರುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವ್ಯಕ್ತಿಗಳನ್ನು ಸಾಮಾನ್ಯವಾಗಿ ಬೆಳಗ್ಗೆ 10-00 ರಿಂದ 06-00 ಗಂಟೆ ಸಮಯದಲ್ಲಿ ಠಾಣೆಗೆ ಕರೆಸಿ ಅವರನ್ನು ವಿಚಾರಣೆ ಮಾಡುತ್ತೀರಿ ಎಂದರೆ ಸಾಕ್ಷಿಯು ಹೌದು ಈ ಪ್ರಕರಣದಲ್ಲಿ ಸಂಜೆ 06-00 ಗಂಟೆಗೆ ಅವರನ್ನು ವಿಚಾರಣೆಗೆ ಕರೆದುಕೊಂಡು ಬರಲು ಹೋಗಿದ್ದು, ಅವರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ತದನಂತರ ರಾತ್ರಿ 09-00 ಗಂಟೆಗೆ ಹೋಗಿರುತ್ತೇವೆ. ಆರೋಪಿತರು ನಾವು ಬೆಳಗ್ಗೆ ಪೊಲೀಸ್ ಠಾಣೆಗೆ ಬರುತ್ತೇವೆ, ಈಗ ರಾತ್ರಿ ಆಗಿದೆ ಎಂದು ಹೇಳಿದರೂ ಸಹ ನಾವು ಅವರ ಮಾತನ್ನು ಗಣನೆಗೆ ತೆಗೆದುಕೊಳ್ಳದೇ ಅವರನ್ನು ಕರೆದುಕೊಂಡು ಹೋಗಲು ಪ್ರಯತ್ನಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ದೂರವಾಣಿ ಮುಖಾಂತರ ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿದರು ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಮನೆಯಿಂದ ಹೊರಗೆ ಕರೆದುಕೊಂಡು ಬರುವಾಗ ಊರಿನ ಜನರು ನಮ್ಮನ್ನು ಸುತ್ತುವರಿದು ನಮ್ಮ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮಗೆ ಈ ಪೊಲೀಸ್ ಸೂಳೆ ಮಕ್ಕಳ ಎಂದು

ಬೈದಿಲ್ಲ ಮತ್ತು 7 ನೇ ಆರೋಪಿ ಚಾಸಾ-1 ರವರ ಸಮವಸ್ತ್ರವನ್ನು ಹಿಡಿದು ಎಳೆದಾಡಿ, 1 ನೇ ಆರೋಪಿಯು ಕೈಮುಷ್ಟಿ ಯಿಂದ ಚಾಸಾ-1 ರವರ ಎದೆಗೆ ಮತ್ತು ಕಲ್ಲಿನಿಂದ ಕಾಲಿಗೆ ಹೊಡೆದು ನೋವುಂಟು ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಊರಿನ ಜನರಿಗೆ ಸಮಾಧಾನ ಪಡಿಸಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಸುಮಾರು 20 ರಿಂದ 30 ಜನ ಸೇರಿದ್ದರು. ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಸುರೇಶ ಮತ್ತು ಸತೀಶ ರವರನ್ನು ಗುನ್ನ ನಂ.430/2017 ರಲ್ಲಿ ವಿಚಾರಣೆಗೆ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ತಳ್ಳಾಡಿಲ್ಲ ಮತ್ತು ನಮ್ಮ ಜೊತೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-21 ರವರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವೇ ಆರೋಪಿತರ ಮನೆಯ ಹತ್ತಿರ ಹೋಗಿ ಅವರ ಹೆಣ್ಣು ಮಕ್ಕಳ ಜೊತೆ ಅನುಚ್ಚಿತವಾಗಿ ವರ್ತಿಸಿ ಅವರನ್ನು ಹಿಡಿದು ಎಳೆದಾಡಿ ಭಯದ ವಾತಾವರಣವನ್ನು ಉಂಟುಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ಧ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಗುನ್ನ ನಂ.430/2017 ಕ್ಕೆ ಸಂಬಂಧಪಟ್ಟ ಕಡತಗಳನ್ನು ಈ ಪ್ರಕರಣಕ್ಕೆ ಸಲ್ಲಿಸಿರುವ ಬಗ್ಗೆ ನಿಮಗೆ ಗೊತ್ತಎಂದರೆ ಅದರ ಬಗ್ಗೆ ತನಿಖಾಧಿಕಾರಿಗಳಿಗೆ ಗೊತ್ತು ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.